**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**
**ಅಫಜಲಪೂರ**

ಸಿಸಿ ನಂ.283/2016

ಚಾಸಾ-12 ಪ್ರಾಸಾ-12

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 03.04.2021

| | | |
|---|---|---|
| ಹೆಸರು | ಃ | ಸುಧಾಕರ ಬಿರಾದಾರ |
| ತಂದೆ ಹೆಸರು | ಃ | ಬಳವಂತರಾವ |
| ವಯಸ್ಸು | ಃ | 42-ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ಮೊರಬಿ., ಗುಜರಾತ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2014 ರಲ್ಲಿ ನಾನು ಜಿ.ಪಂ. ನಲ್ಲಿ ಸಿಎ ಸಿಬ್ಬಂದಿ ಎಂದು ಎಂದು ಸೇವೆ ಸಲ್ಲಿಸಿದ್ದೇನೆ. ಚಾಸಾ-1 ಗೊತ್ತಿಲ್ಲ. 1ನೇ ಆರೋಪಿ ಗೊತ್ತು. ಉಳಿದ ಆರೋಪಿತರು ಗೊತ್ತಿಲ್ಲ. ಚಾಸಾ-7 ರಿಂದ 10, 11, 13 ರವರು ಜಿ.ಪಂ. ನಲ್ಲಿ ಲೆಕ್ಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಗೌರ ಬಿ. ಗ್ರಾ.ಪಂ. ಗೆ ಸಂಬಂಧಿಸಿದಂತೆ ಹಣ ಅವ್ಯವಹಾರವಾದ ಬಗ್ಗೆ ಚಾಸಾ-1 ರವರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ಸದರಿ ಕಾಮಗಾರಿಗಳ ಅವ್ಯವಹಾರವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲುಃ ಎಪಿಪಿ ಯವರಿಂದ

ಗೌರ ಬಿ ಗ್ರಾ.ಪಂ. ಸಂಬಂಧಿಸಿದ ಲೆಕ್ಕ ಪರಿಶೋಧನೆಗೆಂದು ಚಾಸಾ-7 ರವರಿಗೆ ಸಹಾಯಕನಾಗಿ ನಾನು, ಚಾಸಾ-8 ರಿಂದ 10, 11, 13 ರವರನ್ನು ಲೆಕ್ಕಪರಿಶೋಧನೆಗೆಂದು ದಿನಾಂಕ 27.12.2014 ರಂದು ನೇಮಕ ಮಾಡಿದ್ದು, ಚಾಸಾ-1 ರವರಿಗೆ ಗೌರ ಬಿ. ಗ್ರಾ.ಪಂ. ನ ಲೆಕ್ಕಪರಿಶೋಧನೆ ವರದಿಯನ್ನು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಸದರಿ ಗ್ರಾಮದ 43 ಕಾಮಗಾರಿಗಳ ಕಡತಗಳನ್ನು ಲೆಕ್ಕಪರಿಶೋಧನೆಗೆ ಲಭ್ಯವಾಗಿದ್ದು ಸದರಿ 43 ಕಡತಗಳನ್ನು ಪರಿಶೀಲಿಸಿ ಲೆಕ್ಕಪರಿಶೋಧನೆ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಇನ್ನುಳಿದ 110 ಕಾಮಗಾರಿಗಳ ಕಡತಗಳು ತನಿಖಾ ತಂಡಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2013-14 ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸಿದ್ದು ಒಟ್ಟು 368 ಕಾಮಗಾರಿಗಳ ಒಟ್ಟು ಮೊತ್ತ ರೂ.5,62,46,000/- ಗಳ ಕ್ರಿಯಾ ಯೋಜನೆ ತಯಾರಿಸಿ ಜಿ.ಪಂ. ಮೇಲಾಧಿಕಾರಿಯವರ ಅನುಮೋದನೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಕಿರ್ದಿ ಪುಸ್ತಕದಲ್ಲಿ ಗೌರ ಬಿ. ಗ್ರಾ.ಪಂ.ಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳ ಹಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಕಿರ್ದಿ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಕ್ರಿಯಾ ಯೋಜನೆಯ ಅನುಸಾರ ಒಟ್ಟು 368 ಕಾಮಗಾರಿಗಳನ್ನು ಅನುಷ್ಠಾನಕ್ಕೆ ನಿಗದಿಪಡಿಸಿಕೊಂಡಿದ್ದು ಇದರಲ್ಲಿ 320 ಕಾಮಗಾರಿಗಳು MIS ನಲ್ಲಿ ಅಳವಡಿಸಿದ್ದು ಇವುಗಳಲ್ಲಿ 153 ಕಾಮಗಾರಿಗಳಿಗೆ ಹಣ ಪಾವತಿ ಮಾಡಿದ್ದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ವಶಪಡಿಸಿಕೊಂಡ 75 ಕಡತಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ 43 ಕಡತಗಳು ಗೌರ ಬಿ. ಗ್ರಾ.ಪಂ.ದಿಂದ ಅನುಷ್ಠಾನಗೊಳಿಸಿದ MGNREGA ಯೋಜನೆಗೆ ಸಂಬಂಧಿಸಿದ್ದು ಸದರಿ 43 ಕಡತಗಳಲ್ಲಿ ಕೂಲಿಗಾಗಿ ಪಾವತಿಸಿದ NMR ಗಳಲ್ಲಿ 22 ಕಾಮಗಾರಿಗಳ

ಕಡತಗಳಲ್ಲಿ ಕೂಲಿ ಕಾರ್ಮಿಕರ ಸಹಿಯಿಲ್ಲದ ಮತ್ತು ಒಂದೇ ತರಹದ ಹೆಬ್ಬೆಟ್ಟಿನ ಗುರುತುಗಳೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಅವುಗಳ ಒಟ್ಟು ಮೊತ್ತ ರೂ.18,12,179/- ಎಂದರೆ ಸರಿಯಲ್ಲ.

NMR ನಲ್ಲಿ ಕೂಲಿಗಾರರ ಸಹಿಯಿಲ್ಲದೇ ಹಣ ಪಾವತಿಸಿರುವ ಬಗ್ಗೆ 43 ಕಡತಗಳನ್ನು ಪರಿಶೀಲಿಸಿದಾಗ ಸದರಿ ಯೋಜನೆಯ ಕಾಮಗಾರಿಗಳಿಗೆ ಕೂಲಿಗಾಗಿ ಹಣ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಆದರೆ NMR ನಲ್ಲಿ ಕೂಲಿದಾರರಿಂದ ಸಹಿ ಪಡೆಯದೇ ರೂ.3,22,804/- ಗಳನ್ನು ವಿವಿಧ ಕಾಮಗಾರಿಗಳ ಕೋಡನಲ್ಲಿ ವಿವಿಧ ಮೊತ್ತಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ.

ಸದರಿ ಯೋಜನೆಯ 43 ಕಡತಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳಿಗಾಗಿ ಸರಬರಾಜಿಸಿದ ಸಾಮಗ್ರಿಗಳನ್ನು ನಮೂನೆ-32 ರಲ್ಲಿ ನಮೂದಿಸಿದ್ದು 43 ಕಡತಗಳ ಪೈಕಿ 10 ಕಡತಗಳಿಗೆ ಸಂಬಂಧಿಸಿದಂತೆ MIS ನಲ್ಲಿ ರೂ.18,35,475/- ಗಳ ಹಣ ಸಂದಾಯ ಮಾಡಿದ ಬಗ್ಗೆ ಕಂಡು ಬಂದಿದ್ದು ಅವುಗಳಿಗೆ ಸಂಬಂಧಿಸಿದ ಯಾವುದೇ ಓಚರಗಳು ಇರುವುದಿಲ್ಲ ಎಂದರೆ ಸರಿಯಲ್ಲ.

PKGB Bank, Afzalpur A/c. No.11020100007244 ಇದ್ದು ಸದರಿ ಖಾತೆ ಪರಿಶೀಲಿಸಲಾಗಿ ದಿನಾಂಕ 01.04.2013 ರಿಂದ 22.11.2014 ರವರೆಗೆ ಕಾಮಗಾರಿಗಾಗಿ ಒಟ್ಟು ರೂ.4,92,491/- ಗಳನ್ನು ವೆಚ್ಚ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ವೆಚ್ಚದ ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸದೇ ಇದ್ದುದರಿಂದ ರೂ.4,92,491/- ಗಳ ಸರಕಾರದ ಸುತ್ತೋಲೆ ದಿನಾಂಕ 18.04.2007 ರ ಪ್ರಕಾರ ವಸೂಲಾತಿಗೆ ಸೂಚಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಕಾಮಗಾರಿಗಳು ನಿರ್ವಹಿಸಿದ ಬಗ್ಗೆ ಹಂತ ಹಂತವಾಗಿ ಮೂರು ಫೋಟೋಗಳನ್ನು ಲಗತ್ತಿಸಬೇಕಾಗಿದ್ದು ಎರಡು ಫೋಟೊ ಕೆಲವು ಕಡತಗಳಲ್ಲಿ

ಯಾವುದೇ ಫೋಟೋ ಅಂಟಿಸಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೋಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಡೀಕರಣ ಪಡೆಯದೇ ಲಗತ್ತಿಸಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ.

2013-14 ಮತ್ತು 2014-15 ನೇ ಸಾಲಿನ IMS ತಖ್ತೆ ಪ್ರಕಾರ 153 ಕಾಮಗಾರಿಗಳಿಗೆ ಕೂಲಿಗಾಗಿ ಮತ್ತು ಸಾಮಗ್ರಿಗಳಿಗಾಗಿ ಹಣ ಪಾವತಿಸಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಇದರಲ್ಲಿ 111 ಕಾಮಗಾರಿಗಳಿಗಾಗಿ ಉಮೇಶ ಕಲ್ಲಪ್ಪ ರವರಿಗೆ ರೂ.2,56,04,652/- ಗಳನ್ನು 5 ನೇ ಆರೋಪಿತನಿಗೆ ರೂ.1,48,08,000/- ಗಳನ್ನು, 7 ನೇ ಆರೋಪಿಗೆ ರೂ.47,20,595/- ಗಳನ್ನು, 6 ನೇ ಆರೋಪಿಗೆ ರೂ.17,77,509/- ಗಳನ್ನು, 9 ನೇ ಆರೋಪಿಗೆ ರೂ.13,27,932/- ಗಳನ್ನು, ಮೋಶಿನ್ ಪಟೇಲ್ ಇವರಿಗೆ ರೂ.8,67,812/- ಗಳನ್ನು, 4 ನೇ ಆರೋಪಿತನಿಗೆ ರೂ.6,78,635/- ಗಳನ್ನು, 8 ನೇ ಆರೋಪಿಗೆ ರೂ.6,32,292/- ಗಳನ್ನು, ಪಟೇಲ್ ಸಿಮೆಂಟ್‌ಗೆ ರೂ.92,892/- ಗಳನ್ನು ಪವಾತಿಸಿರುವುದು ಕಂಡಬರುತ್ತದೆ ಎಂದರೆ ಸರಿಯಲ್ಲ. ಮೇಲ್ಕಂಡವರ ಪೈಕಿ 4, 5, 7 ನೇ ಆರೋಪಿತರಿಗೆ ಕಾಮಗಾರಿಯ ಸಾಮಗ್ರಿಗಾಗಿ ಹಣ ಪಾವತಿಸಿದ್ದು ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಪಾವತಿಸಿದ್ದು ಕಂಡುಬಂದಿದ್ದು ಸಂಬಂಧಪಟ್ಟ ಅಧಿಕಾರಿಗಳಿಂದ ಪರಿಷ್ಕೃತ ಅನುಮೋದನೆ ಪಡೆದುಕೊಂಡ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

MIS ಪ್ರಕಾರ ಸದರಿ ಯೊಜನೆಯಲ್ಲಿ 2013-14, 2014-15 ಸಾಲಿನಲ್ಲಿ ಒಟ್ಟು 153 ಕಾಮಗಾರಿಗಳಿಗೆ ಹಣ ಪಾವತಿಸಿದ್ದು ಅವುಗಳ ಪೈಕಿ 132 ಕಾಮಗಾರಿಗಳ ಬಗ್ಗೆ MIS ನಲ್ಲಿ ಫೀಡ್ ಆಗಿರುತ್ತದೆ ಎಂದರೆ ಸರಿಯಲ್ಲ. ಅವುಗಳ ಪೈಕಿ 43 ಕಾಮಗಾರಿಗಳ ಕಡತಗಳು ಲಬ್ಯವಿದ್ದು ಅವುಗಳಲ್ಲಿ 21 ಕಡತಗಳ ಬಗ್ಗೆ MIS ನಲ್ಲಿ ಫೀಡ್ ಮಾಡಿದ್ದು 22 ಕಾಮಗಾರಿಗಳ ಕಡತಗಳ ಬಗ್ಗೆ MIS ನಲ್ಲಿ ಫೀಡ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇನ್ನುಳಿದ 110 ಕಾಮಗಾರಿಗಳ ಕಡತಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ

ಕಾಮಗಾರಿಗಳಿಗೆ ಪಾವತಿಸಿದ ಒಚರಗಳನ್ನು ಹಾಜರುಪಡಿಸದೇ ರೂ.5,19,03,853/- ಹಣವನ್ನು ಆರೋಪಿತರು ಸ್ವಂತಕ್ಕೆ ಉಪಯೋಗಿಸಿಕೊಂಡು ಮೋಸ ಮಾಡಿದ ಬಗ್ಗೆ ಆಡಿಟ್ ವರದಿಯಿಂದ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಇನ್ನುಳಿದ 110 ಕಡತಗಳನ್ನು ತನಿಖೆಗೆ ಹಾಜರುಪಡಿಸದೆ ಕಳ್ಳತನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ 153 ಕಾಮಗಾರಿಗಳಿಗೆ ಸಂಬಂಧಿಸಿದ ಸರಕಾರಿ ಹಣ ರೂ.5,19,03,853/- ಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಸರಕಾರಕ್ಕೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ತಾಂತ್ರಿಕ ತಂಡದವರ ಪರಿಶೀಲನೆ ನಂತರ ಕಾಮಗಾರಿಗಳಿಗೆ ಅಂದಾಜು ಪತ್ರಿಕೆಯಲ್ಲಿ ನಿಗದಿಪಡಿಸಿದಂತೆ ಸಾಮಗ್ರಿ ಬಾಬ್ತು 2014 ರಲ್ಲಿ ಮೋಸಿನ್ ಅಹ್ಮದ ಪಟೇಲ ರವರಿಗೆ ಹಣ ಪಾವತಿಯಾಗಿದ್ದು ಹಾಗೂ ಕಾಮಗಾರಿಗಳನ್ನು ಅಂದಾಜು ಪತ್ರಿಕೆ ಪ್ರಕಾರ ಪೂರ್ಣಗೊಳಿಸಿರುವ ಬಗ್ಗೆ ತಾಂತ್ರಿಕ ತಂಡದಿಂದ ಪರಿಶೀಲಿಸಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸೊನ್ನ ಮೇನ್ ರೊಡದಿಂದ ಸೋಹೆಲ್ ಪಟೆಲ ರವರ ಹೊಲದವರೆಗೆ ಮುರುಮ ರಸ್ತೆ ಮತ್ತು ಸೊನ್ನ ನಾಗಪ್ಪ ಬಸಣ್ಣ ಕಿಣಗಿ ಹೊಲದಿಂದ ಶಿವಪುತ್ರ ಕಿಣಗಿ ರವರ ಹೊಲದವರೆಗೆ ಕಾಮಗಾರಿಗೆ ಸಂಬಂಧಿಸಿದಂತೆ ಪುನಃ ಸುಳ್ಳು ಬಿಲ್ಲುಗಳನ್ನು ತಯಾರಿಸಿ 5 ನೇ ಆರೋಪಿತನ ಖಾತೆಗೆ ದಿನಾಂಕ 02.09.2014 ರೂ.33,88,000/- ಗಳನ್ನು ನಿಯಮಬಾಹಿರವಾಗಿ ಪಾವತಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ MGNREGA ನೇದ್ದರಡಿಯಲ್ಲಿನ 110 ಕಡತಗಳನ್ನು ಕಳ್ಳತನ ಮಾಡಿ ಕಾಮಗಾರಿಗಳನ್ನು ಪೂರ್ತಿಗೊಳಿಸದೇ ರೂ.5,19,03,853/- ಗಳನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಸರಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ಸರಕಾರಕ್ಕೆ ವಂಚನೆ ಹಾಗೂ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಘಟನೆ ಕುರಿತು ಈಗ ಓದಿ ಹೇಳಲಾದ ನಿಪಿ-19 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ಮಾಹಿತಿಯಿದ್ದರೂ ಸಹ ಅರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.
ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ